**PCR No. 129/2024**
**PW: 1**

**ದಿನಾಂಕ: 08-06-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಶ್ರೀ.ಎಂ.ಎ.ಎನ್ ವಕೀಲರಿಂದ ದೂರುದಾರರ ಪರ:**

ನಾನು ಈ ಪ್ರಕರಣದಲ್ಲಿ ದೂರುದಾರನಾಗಿರುತ್ತೇನೆ. ನನ್ನ ಸತ್ಯ ಹೇಳಿಕೆ ಬದಲಿಗೆ ಪ್ರಮಾಣ ಪತ್ರಗಳನ್ನು ಸಲ್ಲಿಸಿರುತ್ತೇನೆ, ಅದರಲ್ಲಿ ಇರುವ ವಿಷಯಗಳು ಸತ್ಯವಾಗಿದ್ದು ಅದನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ನಿಪಿ-1 : ಚೆಕ್ ನಂ.**707560** ದಿನಾಂಕ: 03-09-2024.
ನಿಪಿ-2 : ದಿಃ04.09.2024 ರಂದು ಬ್ಯಾಂಕರವರು ನೀಡಿರುವ ಒಂದು ಹಿಂಬರಹ.
ನಿಪಿ-3 : ಲೀಗಲ್ ನೋಟಿಸ್ ದಿ.01-10-2024.
ನಿಪಿ-4 : ಅಂಚೆ ರಸೀದಿ
ನಿಪಿ-5 : ಟ್ರ್ಯಾಕ್ ಕನ್ಸಯನಮೆಂಟ್ ವರದಿ.

ಆದುದರಿಂದ ನಾನು ಹಾಕಿರುವ ದೂರನ್ನು ಸಂಜ್ಞಾನ ತೆಗೆದುಕೊಳ್ಳಲು ವಿನಂತಿಸಿಕೊಳ್ಳುತ್ತೇನೆ.

( ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಲ್ಲಿ ಹೇಳಿ ಬೆರಳಚ್ಚು ಮಾಡಿಸಲಾಯಿತು )

ಓ. ಹೆ. ಕೆ.ಸರಿ ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.